## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದ ರಾಜು ರವರ
(ನಿಯಮ-72ರ ಮೇರೆಗೆ ) ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.

**ಸೂಚನೆ**

ರಾಜ್ಯದ ಜನರಿಗೆ ನಿಗಧಿತ ಸಮಯದಲ್ಲಿ ಸೇವೆ ನೀಡುವ ಉದ್ದೇಶದಿಂದ ಕರ್ನಾಟಕ ಸಕಾಲ ಸೇವೆಗಳ ಕಾಯಿದೆಯನ್ನು 2011 ರಲ್ಲಿ ಜಾರಿಗೆ ತರಲಾಗಿದೆ. ಇದರಲ್ಲಿ ಸರ್ಕಾರದ 99 ಇಲಾಖೆಗಳು ಮತ್ತು ಒಂದು ಸಾವಿರಕ್ಕೂ ಹೆಚ್ಚು ಸೇವೆಗಳನ್ನು ಒಳಗೊಂಡಿದೆ. ಇದರಡಿ ಲಕ್ಷಾಂತರ ಅರ್ಜಿಗಳು ಸಲ್ಲಿಕೆಯಾಗುತ್ತಿವೆ. ಆದರೆ, ಅಧಿಕಾರಿಗಳು ವಿಲೇವಾರಿಗೆ ಆಸಕ್ತಿ ತೋರುತ್ತಿಲ್ಲ. ವಿವಿಧ ಕಾರಣ ನೀಡಿ, ಜನರನ್ನು ಕಛೇರಿಯಿಂದ ಕಛೇರಿಗೆ ಅಲೆದಾಡಿಸುತ್ತಿದ್ದಾರೆ. ಕಾಯಿದೆಯ ಮೂಲ ಆಶಯವೇ ಅರ್ಥ ಕಳೆದುಕೊಂಡಿದೆ ಎಂಬ ಆರೋಪ ಕೇಳಿ ಬಂದಿದೆ. ಪ್ರಮಾಣ ಪತ್ರಗಳು, ಪರವಾನಗಿ ಪತ್ರ,ಅಂಕಪಟ್ಟಿಗಳು, ಖಾತಾ ಬದಲಾವಣೆ, ಆಸ್ತಿ ಸಂಬಂಧಿತ ಹಾಗೂ ವಿವಿಧ ಅಗತ್ಯತೆಗಳ ಈಡೇರಿಕೆಗಾಗಿ ಸಾರ್ವಜನಿಕರು ಅರ್ಜಿ ಸಲ್ಲಿಸಿ ಪರದಾಡುತ್ತಿದ್ದಾರೆ. ಈ ವಿಷಯವು ಸಾರ್ವಜನಿಕರಿಗೆ ಮಹತ್ವದಾಗಿರುವುದರಿಂದ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಹೇಳಿಕೆ**

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಮತ್ತು ತಿದ್ದುಪಡಿ ಅಧಿನಿಯಮ 2014ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

**1.** ಪ್ರತಿದಿನವೂ ಬಾಕಿ ಅರ್ಜಿಗಳ ವಿವರಗಳನ್ನು ಸಂಬಂಧಪಟ್ಟ ಹಾಗೂ ಅವಧಿ ಮೀರಿ ಬಾಕಿ ಹೊಂದಿದ ಇಲಾಖೆಗಳ ಕಛೇರಿಗಳಿಗೆ ಕಳುಹಿಸಿ, ಸಕಾಲ ಸೂಚಿತ ಅವಧಿಯೊಳಗೆ ವಿಲೇಗೊಳಿಸಲು ತಿಳಿಸಲಾಗಿದೆ.

**2.** ಸಕಾಲ ಅವಧಿ ಮೀರಿದ ಅರ್ಜಿಗಳನ್ನು ಬಾಕಿ ಉಳಿಸಿಕೊಂಡಿರುವ ಅಧಿಕಾರಿ/ ನೌಕರರುಗಳಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದೆ.

**3.** ಸಕಾಲ ಜಿಲ್ಲಾ ಪರಿಶೀಲನಾ ತಂಡ, ಸಕಾಲ ವ್ಯಾಪ್ತಿಗೆ ಒಳಪಡುವ ಇಲಾಖೆ / ಕಛೇರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ.

**4.** ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಪ್ರತಿ ಮಾಹೆಯಲ್ಲಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿ, ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ತಮ್ಮ ಇಲಾಖೆಗೆ ಸಂಬಂಧಿಸಿದ ಅರ್ಜಿಗಳನ್ನು ಸಕಾಲ ಸೂಚಿತ ಅವಧಿಯೊಳಗೆ ವಿಲೇಗೊಳಿಸಲು ಸೂಚನೆ ನೀಡಲಾಗಿದೆ. ಹಾಗೂ ತಮ್ಮ ಅಧೀನಕ್ಕೊಳಪಡುವ ಅಧಿಕಾರಿ / ಸಿಬ್ಬಂದಿಗಳಿಗೆ ಇದೇ ರೀತಿ ಅರ್ಜಿಗಳನ್ನು ವಿಳಂಬಗೊಳಿಸದೇ ಸಕಾಲ ಸೂಚಿತ ಅವಧಿಯೊಳಗೆ ವಿಲೇಗೊಳಿಸುವಂತೆ ನಿರ್ದೇಶನ ನೀಡಲಾಗಿದೆ.

ಕಡತ ಸಂಖ್ಯೆ: ಕಂಇ 302 ಸಮಿತಿ 2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು